

# ನೈಸರ್ಗಿಕ ಹೃದಯ!

ಪ್ರೀತಿ, ಪ್ರೇಮ, ಅನುರಾಗಗಳ ಅನುಭೂತಿಯ ಒರತೆ ಹೊರ ಹೊಮ್ಮುವ ಏಕೈಕ ಜಾಗವೆಂದರೆ ಅದು ಹೃದಯ. ಅಂತೆಯೇ ಪ್ರೇಮಿಗಳು ತಮ್ಮ ಪ್ರೀತಿಯನ್ನು ಸಾಂಕೇತಿಕವಾಗಿ “ಹೃದಯ”ದ ಮೂಲಕವೇ ಅಭಿವ್ಯಕ್ತಪಡಿಸುತ್ತಾರೆ. ಕೇವಲ ಮನುಷ್ಯರು ಮಾತ್ರವಲ್ಲ ಕೆಲವೊಮ್ಮೆ ಭೂಮಿಯೂ ಕೂಡ ತನ್ನ ಪ್ರೀತಿಯನ್ನು ಅತ್ಯಂತ ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ. ಪ್ರೇಮಿಗಳು ತಮ್ಮ ಪ್ರೇಮ ನಿವೇದನೆಯನ್ನು ಅರ್ಪಿಸಲು ಈ ಜಗತ್ತಿನಲ್ಲಿ ಸಾವಿರಾರು ಆದರ್ಶ ತಾಣಗಳಿವೆ. ಆದರೆ ಹೃದಯದಲ್ಲಿ ಪ್ರೀತಿಯ ಕಿಚ್ಚನ್ನು ಹೆಚ್ಚಿಸಲು ಭೂದೃಶ್ಯ (ಲ್ಯಾಂಡ್‌ಸ್ಕೇಪ್)ವು ನೈಸರ್ಗಿಕ ಸೆಟ್ಟಿಂಗ್ ಅನ್ನು ಒದಗಿಸುವ ಕೆಲವೇ ಕೆಲವು ಸ್ಥಳಗಳಿವೆ.

ಹವಾಯಿ ದ್ವೀಪದ ವಾಯವ್ಯ ಕರಾವಳಿಯಲ್ಲಿ ‘ನಕಾಲೆಲೆ ಬ್ಲೋಹೋಲ್’ ಎಂಬ ಅದ್ಭುತ ಪ್ರವಾಸಿ ತಾಣವಿದೆ. ಇದೊಂದು ‘ಪ್ರಾಕೃತಿಕ ಗೀಸರ್’ ಆಗಿದ್ದು ಸಮುದ್ರದ ನೀರನ್ನು ಗಾಳಿಯಲ್ಲಿ 100 ಅಡಿಗಳಷ್ಟು ಎತ್ತರಕ್ಕೆ ಚಿಮ್ಮಿಸುತ್ತದೆ. ಈ ಪ್ರದೇಶಕ್ಕೆ ಆಗಮಿಸುವ ಪ್ರವಾಸಿಗರನ್ನು ಸೆಳೆಯುವ ಮತ್ತೊಂದು ಜಾಗವೆಂದರೆ ಬಂಡೆಯಲ್ಲಿ ಒಡಮೂಡಿರುವ ಹೃದಯಾಕಾರದ ರಂಧ್ರ. ಹವಾಯಿ ದ್ವೀಪದ ಮಾಯಿಯ ಬಂಡೆ ಮಧ್ಯದಲ್ಲಿ ರೂಪುಗೊಂಡಿರುವ ಈ ‘ನೈಸರ್ಗಿಕ ಹೃದಯ’ವು ಬ್ಲೋಹೋಲ್‌ಗಿಂತಲೂ ಹೆಚ್ಚಿನ ಆಕರ್ಷಣೆಯ ಕೇಂದ್ರಬಿಂದುವಾಗಿದ್ದು ಇನ್‌ಸ್ಟಾಗ್ರಾಮ್ ಡಾರ್ಲಿಂಗ್ ಎಂದೇ ಜನಪ್ರಿಯತೆ ಗಳಿಸಿಕೊಂಡಿದೆ.

■ ವಿದ್ಯಾ ವಿ. ಹಾಲಭಾವಿ

